ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 21-12-2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ರಾಷ್ಟ್ರೀಯ ಗ್ರಾಹಕರ ದಿನಾಚರಣೆ – 2015:<br>"ಸುರಕ್ಷಿತ ಮತ್ತು ಆರೋಗ್ಯಕರ ಆಹಾರ ವಿಧಾನ-ಆಹಾರ ಕಲಬೆರಕೆ ವಿರುದ್ಧ ಕದನ" | 22-12-2015<br>ಮಂಗಳವಾರ<br>ಬೆಳಿಗ್ಗೆ<br>10-30 ಗಂಟೆಗೆ | ಶಿಕ್ಷಕರ ಸದನ,<br>(ಕಾವೇರಿ ಭವನ ಎದುರು)<br>ಕೆಂಪೇಗೌಡ ರಸ್ತೆ,<br>ಬೆಂಗಳೂರು |
| 2. | ನಗರಕ್ಕೆ ಭಾರತ ರಾಷ್ಟ್ರಪತಿಗಳ ಆಗಮನ:<br>ಸೂಚನೆ: ಮಾಧ್ಯಮದವರನ್ನು ವಿಮಾನ ನಿಲ್ದಾಣಕ್ಕೆ ಕರೆದೊಯ್ಯಲು ವಾರ್ತಾ ಭವನದಿಂದ ವಾಹನ ವ್ಯವಸ್ಥೆ ಮಾಡಲಾಗಿದ್ದು, ಅಂದು ಮಧ್ಯಾಹ್ನ 1.30 ಗಂಟೆಗೆ ವಾಹನ ಹೊರಡಲಿದೆ. (ಪೊಲೀಸ್ ಆಯುಕ್ತರ ಕಚೇರಿಯಿಂದ ಪಡೆದಿರುವ ಪಾಸ್ ಅನ್ನು ಜೊತೆಯಲ್ಲಿ ತರಬೇಕು) | 22-12-2015<br>ಮಂಗಳವಾರ<br>ಮಧ್ಯಾಹ್ನ<br>3-25 ಗಂಟೆಗೆ | ಹೆಚ್.ಎ.ಎಲ್ ವಿಮಾನ ನಿಲ್ದಾಣ,<br>ಬೆಂಗಳೂರು. |
| 3. | **Inauguration of Magneto Emcephalography Research Centre and NIMHANS Heritage Museum:**<br>**Inauguration by:**<br>**Shri Pranab Mukherjee, Hon'ble President of India**<br>**Gracious presence of:**<br>**Shri Vajubhaivala, Governor of Karnataka.** | 22-12-2015<br>**Tuesday at 4-00 PM** | **Convention Centre, NIMHANS, Bengaluru** |

ನಿರ್ದೇಶಕರ ಪರವಾಗಿ

# <u>ಪತ್ರಿಕಾ ಪ್ರಕಟಣೆ</u>

## <u>ನೂತನ ಕ್ಯಾನ್ಸರ್ ಸಂಸ್ಥೆಗೆ ರಾಷ್ಟ್ರಪತಿಯವರಿಂದ ಶಿಲಾನ್ಯಾಸ</u>

**ಬೆಂಗಳೂರು, ಡಿಸೆಂಬರ್ 21 (ಕರ್ನಾಟಕ ವಾರ್ತೆ)**

**ಬೆಂಗಳೂರಿನ ಡಾ. ಎಂ. ಹೆಚ್. ಮರೀಗೌಡ ರಸ್ತೆಯಲ್ಲಿರುವ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥಾಪನ ದಿನದ ಸಮಾರಂಭ ಹಾಗೂ ಕರ್ನಾಟಕ ರಾಜ್ಯ ಕ್ಯಾನ್ಸರ್ ಸಂಸ್ಥೆಗೆ ಶಿಲಾನ್ಯಾಸದ ಸಮಾರಂಭವನ್ನು ಡಿಸೆಂಬರ್ 23 ರಂದು ಬೆಳಿಗ್ಗೆ 11-15 ಗಂಟೆಗೆ ಹಮ್ಮಿಕೊಳ್ಳಲಾಗಿದೆ.**

**ಭಾರತದ ರಾಷ್ಟ್ರಪತಿ ಶ್ರೀ ಪ್ರಣಬ್ ಮುಖರ್ಜಿ ಅವರು ಶಿಲಾನ್ಯಾಸವನ್ನು ನೆರವೇರಿಸಲಿದ್ದಾರೆ. ರಾಜ್ಯಪಾಲ ಶ್ರೀ ವಜುಭಾಯಿ ರುಡಾಭಾಯಿ ವಾಲ ಅವರು ಸಮಾರಂಭದಲ್ಲಿ ಉಪಸ್ಥಿತರಿರುವರು.**

**ಈ ಸಮಾರಂಭದಲ್ಲಿ ಮುಖ್ಯಮಂತ್ರಿಗಳು, ಕೇಂದ್ರದ ಹಾಗೂ ರಾಜ್ಯದ ಸಚಿವರುಗಳು ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ.**

**ಪಲ್ಲವಿ:ಜಿಪಿಆರ್**

## <u>ಕಾರ್ಮಿಕ ಕಲ್ಯಾಣ ಇಲಾಖೆಯಡಿ ಬರುವ</u>
## <u>ಮಾಲೀಕ ಹಾಗೂ ನೌಕರರಿಗೆ ವಂತಿಗೆ ಪಾವತಿ ಕಡ್ಡಾಯ</u>

**ಬೆಂಗಳೂರು, ಡಿಸೆಂಬರ್ 21 (ಕರ್ನಾಟಕ ವಾರ್ತೆ)**

ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ 1965 ರಡಿಯ ಎಲ್ಲಾ ಕಾರ್ಖಾನೆಗಳು, ಪ್ಲಾಂಟೇಶನ್‌ಗಳು, ಕಾರ್ಯಗಾರಗಳು, ಮೋಟಾರು ವಾಹನ ಸಂಸ್ಥೆಗಳ ಮಾಲೀಕ ವರ್ಗದವರು ನೇಮಿಸಿಕೊಂಡಿರುವ ನೌಕರರು ಕಡ್ಡಾಯವಾಗಿ ರೂ. 18/- ರಂತೆ ವಂತಿಕೆಯನ್ನು ಅಧಿನಿಯಮ 7ಎ ಪ್ರಕಾರ ಫಾರಂ 'ಡಿ' ನಮೂನೆಯೊಂದಿಗೆ ಪಾವತಿಸಬೇಕಿರುತ್ತದೆ. ಅದೇ ರೀತಿ 50 ಕ್ಕಿಂತ ಹೆಚ್ಚಿನ ನೌಕರರನ್ನು ನೇಮಿಸಿಕೊಂಡಿರುವ ಎಲ್ಲಾ ಅಂಗಡಿ, ವಾಣಿಜ್ಯ ಸಂಸ್ಥೆಗಳು, ಚಾರಿಟಬಲ್ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳ ಮಾಲೀಕರು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಅಡಿಯಲ್ಲಿ ವಂತಿಗೆಯನ್ನು ಪಾವತಿಸಬೇಕಾಗಿದೆ.

ಅಧಿನಿಯಮ 7 ರ ಪ್ರಕಾರ ಕಾರ್ಮಿಕರಿಗೆ ಸಂಗ್ರಹಿಸುವ ಬಾಕಿ ವಸೂಲು ಮಾಡಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ನಂ 48, ಮತ್ತಿಕೆರೆ ಮುಖ್ಯರಸ್ತೆ, ಯಶವಂತಪುರ, ಬೆಂಗಳೂರು – 560 022 ಇಲ್ಲಿ ಕಲ್ಯಾಣ ಆಯುಕ್ತರ ಹೆಸರಿನಲ್ಲಿ ತೆರೆದಿರುವ ಅನ್‌ಕ್ಲೇಮ್ಡ್ ಖಾತೆ ಸಂಖ್ಯೆ **32917895845** ಕ್ಕೆ ಚೆಕ್/ಡಿ.ಡಿ ರೂಪದಲ್ಲಿ ಪಾವತಿಸಿ ಸಂಬಂಧಿಸಿದ ಪತ್ರವನ್ನು (ನೌಕರರ ಪಟ್ಟಿ ಸೇರಿದಂತೆ) ಈ ಕಚೇರಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ವಿಳಂಬವಾಗಿ ಪಾವತಿಸುವ ಮಾಲೀಕ ವರ್ಗದವರು ಶೇಕಡ 18 ರಂತೆ ಬಡ್ಡಿ ತೆರಬೇಕಾಗುತ್ತದೆ. ಉಲ್ಲಂಘನೆಗೆ ಕನಿಷ್ಠ ರೂ 500/- ರಿಂದ 1000/- ರೂ. ಮೊತ್ತದ ದಂಡ ವಿಧಿಸಲು ಹಾಗೂ ಮೂರು ತಿಂಗಳಿಂದ ಒಂದು ವರ್ಷದವರೆವಿಗೂ ಜೈಲು ಶಿಕ್ಷೆ ವಿಧಿಸಲು ಕಾನೂನಿನಲ್ಲಿ ಅವಕಾಶವಿರುತ್ತದೆ.

ಈ ಕಾಯ್ದೆಯಡಿಯಲ್ಲಿ ಪಾವತಿಸಬೇಕಾದ ವಂತಿಗೆ ಮೊತ್ತವನ್ನು 15ನೇ ಜನವರಿ 2016 ರೊಳಗೆ **Welfare Commissioner, Bangalore** ಇವರ ವಂತಿಕೆ ಖಾತೆ ಸಂಖ್ಯೆ: **30428019173** ಕ್ಕೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮತ್ತೀಕೆರೆ ರಸ್ತೆ ಶಾಖೆ, ಯಶವಂತಪುರ, ಬೆಂಗಳೂರು – 560 022. ಇಲ್ಲಿಗೆ ನೇರವಾಗಿ ಚೆಕ್/ಡಿ.ಡಿ.// ಮೂಲಕ ಪಾವತಿಸಲು ಕೋರಲಾಗಿದೆ. ಹಾಗೂ **"ಕಲ್ಯಾಣ ಆಯುಕ್ತರು, ಕರ್ನಾಟಕ ಕಾರ್ಮಿಕ ಕಲ್ಯಾಣ ಭವನ, ನಂ 48, 2ನೇ ಮಹಡಿ, ಮತ್ತಿಕೆರೆ ಮುಖ್ಯ ರಸ್ತೆ, (ಆರ್.ಟಿ.ಓ. ಕಚೇರಿ ಹತ್ತಿರ) ಯಶವಂತಪುರ, ಬೆಂಗಳೂರು –22"** ಪಾವತಿಸುವುದು.

ಪಾವತಿಯಾಗದೆ ಇರುವ ಬಾಕಿ ಮೊತ್ತವನ್ನು ಅನ್‌ಕ್ಲೇಮ್ಡ್ ಖಾತೆ ಸಂಖ್ಯೆ: **32917895845** ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮತ್ತೀಕೆರೆ ರಸ್ತೆ ಶಾಖೆ, ಯಶವಂತಪುರ, ಬೆಂಗಳೂರು – 560 022, ಇಲ್ಲಿಗೆ ನೇರವಾಗಿ ಚೆಕ್/ಡಿ.ಡಿ/RTGS/NEFT ಮೂಲಕ ಪಾವತಿಸಲು ಕೋರಲಾಗಿದೆ. ಹಾಗೂ **"ಕಲ್ಯಾಣ ಆಯುಕ್ತರು, ಕರ್ನಾಟಕ ಕಾರ್ಮಿಕ ಕಲ್ಯಾಣ ಭವನ, ನಂ 48, 2ನೇ ಮಹಡಿ, ಮತ್ತಿಕೆರೆ ಮುಖ್ಯ ರಸ್ತೆ, (ಆರ್.ಟಿ.ಓ. ಕಚೇರಿ ಹತ್ತಿರ) ಯಶವಂತಪುರ, ಬೆಂಗಳೂರು –22"** ಈ ಕಚೇರಿಗೆ ಹಣ ಸಂದಾಯ ಮಾಡಿದ ರಶೀದಿ ಮತ್ತು ಫಾರಂ– 'ಡಿ' ಯನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080 – 23570266 ಅಥವಾ www.klwb-kar.com ಮೂಲಕ ಸಂಪರ್ಕಿಸಬಹುದು.

ಪಲ್ಲವಿ:ಪಿಎಸ್‌ಐ.